## ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಮುದ್ದೇಬಿಹಾಳ

ಸಿ.ಸಿ. ನಂ– 22/2024

**C**.**W**.5, **P**.**W**.4

| | | |
|---|---|---|
| ಹೆಸರು | : | ಸಿಧ್ರಾಮ ತಂ. ರಾವುತಪ್ಪ ಕುರಬತಳ್ಳಿ |
| ವಯಸ್ಸು | : | **32** ವರ್ಷ |
| ಉದ್ಯೋಗ | : | ಅಬಕಾರಿ ಪೇದೆ, ಅಬಕಾರಿ ವಲಯ |
| ವಾಸಸ್ಥಳ | : | ಮುದ್ದೇಬಿಹಾಳ. |

ದಿನಾಂಕಃ 17.06.2025. ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿಯವರಿಂದ .**

ನಾನು ಸನ್ 15.10.2019 ರಿಂದ ಇಲ್ಲಿಯವರೆಗೆ ಮುದ್ದೇಬಿಹಾಳ ಅಬಕಾರಿ ವಲಯದಲ್ಲಿ ಅಬಕಾರಿ ಪೇದೆ ಅಂತಾ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.

ದಿಃ 16.10.2023 ರಂದು ನಾನು ಕಚೇರಿಯಲ್ಲಿದ್ದಾಗ ಬೆಳಿಗ್ಗೆ 7–30 ಗಂಟೆಗೆ ಚಾಸಾ–1 ರವರಿಗೆ ಕೊಪ್ಪ ತಾಂಡಾದಲ್ಲಿ ಕಾಶಿರಾಮ ಧಾಕಪ್ಪ ಪವಾರ ಎನ್ನುವವರ ಮನೆಯ ಮುಂದೆ ಅಕ್ರಮವಾಗಿ ಕಳ್ಳಬಟ್ಟಿ ಸಾರಾಯಿಯನ್ನು ತಯಾರಿಸಿ, ಮಾರಾಟ ಮಾಡುವ ಸಲುವಾಗಿ ಸಂಗ್ರಹಿಸಿದ್ದಾರೆ ಅಂತಾ ಖಚಿತವಾದ ಬಾತ್ಮಿ ಬಂದಿದ್ದು, ನಂತರ ಸದರಿ ವಿಷಯವನ್ನು ಚಾಸಾ–1 ರವರು ನನಗೆ ಮತ್ತು ಚಾಸಾ 4 ರವರಿಗೆ ತಿಳಿಸಿ,

ಎಲ್ಲರೂ ಕೂಡಿಕೊಂಡು ನಮ್ಮ ಸರ್ಕಾರಿ ವಾಹನದಲ್ಲಿ ಸದರಿ ಸ್ಥಳಕ್ಕೆ ಹೊರಟು ತಲುಪಿದಾಗ ಮುಂಜಾನೆ 8.00 ಗಂಟೆಯಾಗಿತ್ತು. ನಮಗೆ ಬಂದ ಮಾಹಿತಿಯ ವ್ಯಕ್ತಿ ಬಗ್ಗೆ ಸ್ಥಳಿಯ ಜನರಿಗೆ ವಿಚಾರಿಸುತ್ತಾ ಆ ವ್ಯಕ್ತಿಯ ಮನೆಯ ಹತ್ತಿರ ಹೋಗುತ್ತಿದ್ದಾಗ ಇನ್ನೂ 100 ಮೀಟರ್ ಅಂತರ ಇದ್ದಾಗ ಮನೆಯ ಮುಂದೆ ಇದ್ದ ವ್ಯಕ್ತಿ ನಮ್ಮ ಸಮವಸ್ತ್ರ ನೋಡಿ ಕಬ್ಬಿನ ತೋಟದಲ್ಲಿ ಓಡಿ ಹೋದನು. ನಮಗೆ ಸಂಶಯ ಬಂದು ಸದರಿ ವ್ಯಕ್ತಿಯನ್ನು ಹಿಡಿಯಲು ಪ್ರಯತ್ನಿಸಿದರೂ ಸಿಕ್ಕಿರುವದಿಲ್ಲ. ಮನೆಯ ಮುಂದೆ ಬಂದು ನೋಡಲಾಗಿ ಅಲ್ಲಿ ಒಂದು ಬಿಳಿ ಬಣ್ಣದ ಪ್ಲಾಸ್ಟಿಕ್ ಕ್ಯಾನ್ ಇರುವದು ಕಂಡು ಬಂದಿದ್ದು, ಚಾಸಾ-1 ರವರು ಅಲ್ಲಿದ್ದ ಸ್ಥಳಿಯರನ್ನು ಪಂಚರಾಗಲು ಕೇಳಿಕೊಂಡಾಗ ಚಾಸಾ-2 ಮತ್ತು 3 ರವರು ಪಂಚರಾಗಲು ಒಪ್ಪಿಕೊಂಡರು. ನಂತರ ಚಾಸಾ-1 ರವರು ಸ್ಥಳದಲ್ಲಿಯೇ ಶೋಧನಾ ಸಮುಚ್ಚಿತ ವರದಿ ತಯಾರಿಸಿ, ಸ್ಥಳದಲ್ಲಿದ್ದ 5 ಲೀಟರ್ ಸಾಮರ್ಥ್ಯದ ಬಿಳಿ ಬಣ್ಣದ ಪ್ಲಾಸ್ಟಿಕ್ ಕ್ಯಾನ್ ಇರುವದು ಕಂಡು ಬಂದಿರುತ್ತದೆ.  ಆಗ ಸಮಯ ಬೆಳಿಗ್ಗೆ 8-45 ಗಂಟೆಯಾಗಿರುತ್ತದೆ. ನಂತರ ಮನೆಯನ್ನು ಶೋದನೆ ಮಾಡಿ ನೋಡಲಾಗಿ ಅದರ ಬಾಗಿಲು ಪೂರ್ವ ದಿಕ್ಕಿಗೆ ಇದ್ದು, ಮನೆ ಎರಡು ಕೋಣೆಗಳನ್ನು ಹೊಂದಿದ್ದು, ಮನೆಯಲ್ಲಿ ಯಾವುದೇ ಅಬಕಾರಿ ಪದಾರ್ಥಗಳು ಕಂಡು ಬಂದಿರುವದಿಲ್ಲ. ಮೊದಲನೇ ಕೋಣೆಯ ಬಲಗಡೆ ಮಾಡಿನಲ್ಲಿ ಒಂದು ಪ್ಲಾಸ್ಟಿಕ್ ಬ್ಯಾಗ್‌ದಲ್ಲ ಆಧಾರ ಕಾರ್ಡನ ಪ್ರತಿ ಸಿಕ್ಕಿದ್ದು,

ಅದರಲ್ಲಿ ಕಾಶಿರಾಮ ಥಾಕಪ್ಪ ಪವಾರ, ಸಾ. ಕೊಪ್ಪ ತಾಂಡಾ ಎಂದು ನಮೂದು ಇರುವದು ಕಂಡುಬಂದಿರುತ್ತದೆ. ನಂತರ ಹೊರಗೆ ನೆರೆದಿದ್ದ ಜನರಿಗೆ ಆಧಾರ ಕಾರ್ಡ ತೋರಿಸಲಾಗಿ ಓಡಿ ಹೋದ ವ್ಯಕ್ತಿ ಆಧಾರ ಕಾರ್ಡದಲ್ಲಿರುವ ಹೆಸರಿನವರು ಎಂದು ಹೇಳಿ, ಯಾವತ್ತೂ ಅವನು ಕಳ್ಳಬಟ್ಟಿ ಸಾರಾಯಿ ಮಾರಾಟ ಮಾಡುತ್ತಾನೆ ಎಂದು ಹೇಳಿದರು. ಚಾಸಾ-1 ರವರು ನೆರೆದ ಜನರನ್ನು ಹೇಳಿಕೆ ನೀಡಲು ಕೋರಿಕೊಂಡಾಗ, ಅವರು ನಿರಾಕರಿಸಿರುತ್ತಾರೆ.

ಚಾಸಾ-1 ರವರು ಪಂಚರ ಸಮಕ್ಷಮ 180 ಎಂ.ಎಲ್ ಕಳ್ಳಬಟ್ಟಿ ಸಾರಾಯಿಯನ್ನು ಒಂದು ಗಾಜಿನ ಬಾಟಲಿಯಲ್ಲಿ ಮಾದರಿಗಾಗಿ ಕಾಯ್ದಿರಿಸಿ ಅದಕ್ಕೆ ಬಟ್ಟೆಯಿಂದ ಸುತ್ತಿ ಸೀಲ್ ಹಾಕಿ ಚಾಸಾ-1 ರವರ ಮತ್ತು ಪಂಚರ ಸಹಿಯುಳ್ಳ ಚೀಟಿಗಳನ್ನು ಅಂಟಿಸಿ, ಸ್ಥಳದಲ್ಲಿಯೇ ಮಾದರಿಯ ನಕಲುಗಳನ್ನು ತಯಾರಿಸಿ, ಬೆಳಿಗ್ಗೆ 8-45 ರಿಂದ 9-45 ಗಂಟೆಯವರೆಗೆ ಸವಿಸ್ತಾರ ಪಂಚನಾಮೆ ಮಾಡಿ ಅಮಾನತ್ತು ಪಡಿಸಿಕೊಂಡಿರುತ್ತಾರೆ. ನಂತರ ನಾವು, ಪಂಚನಾಮೆ ಮತ್ತು ಮಾಲಿನೊಂದಿಗೆ ಕಚೇರಿಗೆ ಬಂದು ಸರ್ಕಾರಿ ಪರವಾಗಿ ಚಾಸಾ-1 ರವರು ದೂರನ್ನು ದಾಖಲಿಸಿಕೊಂಡಿರುತ್ತಾರೆ. ಈ ಬಗ್ಗೆ ನಾನು ಚಾಸಾ-7 ರವರಿಗೆ ದಿ. 25.10.2023 ರಂದು ಹೇಳಿಕೆ ನೀಡಿರುತ್ತೇನೆ.

ದಿನಾಂಕ 1.11.2023 ರಂದು ಚಾಸಾ 7 ರವರ ಆದೇಶದ ಮೇರೆಗೆ ಈ ಪ್ರಕರಣದಲ್ಲಿ ಮಾದರಿಗಾಗಿ ಕಾಯ್ದಿರಿಸಿದ 180 ಎಂ.ಎಲ್ ನ ಕಳ್ಳಬಟ್ಟಿ ಸಾರಾಯಿಯನ್ನು ರಾಸಾಯನಿಕ ಪರೀಕ್ಷೆಗಾಗಿ ಬಸ್ ಮೂಲಕ ತೆಗೆದುಕೊಂಡು ಹೋಗಿ ದಿಃ 2.11.2023 ರಂದು ಚಾಸಾ 6 ರವರಿಗೆ ನೀಡಿರುತ್ತೇನೆ. ನಂತರ ದಿ. 3.11.2023 ರಂದು ಚಾಸಾ 6 ರವರು ಪರೀಕ್ಷಿಸಿದ ನಂತರ ರಾಸಾಯನಿಕ ಪರೀಕ್ಷಾ ವರದಿ ಮತ್ತು ಮಾದರಿಗಳನ್ನು ತೆಗೆದುಕೊಂಡು ಬಂದು ದಿಃ 4.11.2023 ರಂದು ಚಾಸಾ 7 ರವರಿಗೆ ಹಾಜರಪಡಿಸಿರುತ್ತೇನೆ. ಈ ಬಗ್ಗೆ ನಾನು ಚಾಸಾ 7 ರವರ ಮುಂದೆ ಹೇಳಿಕೆ ನೀಡಿರುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಒಂದು ಮದ್ಯದ ಮಾದರಿಯ ಬಾಟಲಿಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಮು.ಮಾ 1 ಎಂದು ಗುರುತಿಸಲಾಗಿದೆ.

ಆ ದಿನ ಓಡಿ ಹೋದ ವ್ಯಕ್ತಿಯೇ ಈ ದಿನ ನ್ಯಾಯಾಲಯದ ಮುಂದೆ ಇರುವ ಆರೋಪಿಯಾಗಿದ್ದಾನೆ ಎಂದು ಸಾಕ್ಷಿ ಅವರನ್ನು ನೋಡಿ ಗುರುತಿಸುತ್ತಾರೆ.

**ಪಾಟೀ ಸವಾಲುಃ ಶ್ರೀ. ಕೆ ಹೆಚ್ ಸಿ ವಕೀಲರಿಂದ ಆರೋಪಿ ಪರವಾಗಿ**

ಚಾಸಾ-1 ರವರು ನಮ್ಮ ಮೇಲಾಧಿಕಾರಿಗಳು ಎಂದರೆ ಸರಿ. ಮುಮಾ-1 ಮತ್ತು ಪ್ಲಾಸ್ಟಿಕ್ ಕ್ಯಾನ್ ನಂತಹ ಬಾಟಲಿಗಳು ನಮ್ಮ ಕಛೇರಿಯಲ್ಲಿ ಬೇರೆ ಪ್ರಕರಣಕ್ಕೆ

ಸಂಬಂಧಪಟ್ಟವು ಇರುತ್ತವೆ ಎಂದರೆ ಸರಿ. ಮುಮಾಲಿಗೂ ಮತ್ತು ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆ ದಿನ ನಾನು ಚಾಸಾ-1 ರವರೊಂದಿಗೆ ದಾಳಿಗೆ ಹೋಗಿರುವದಿಲ್ಲ ಎಂದರೆ ಸರಿಯಲ್ಲ. ಆರೋಪಿಯನ್ನು ಇದೇ ಮೊದಲ ಬಾರಿಗೆ ನಾನು ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಬಸ್ ಟಿಕೇಟನ್ನು ಚಾಸಾ-7 ರವರಿಗೆ ಹಾಜರುಪಡಿಸಿರುವದಿಲ್ಲ. ಚಾಸಾ-1 ರವರು ಮಾಡಿದ ಸುಳ್ಳು ಪ್ರಕರಣಕ್ಕೆ ಅನುಕೂಲವಾಗಲೆಂದು ಚಾಸಾ-7 ರವರಿಗೆ ಸುಳ್ಳು ವರದಿ ನೀಡಿ ಸುಳ್ಳು ಹೇಳಿಕೆ ನೀಡಿದ್ದೆನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆ ನ್ಯಾ ನನ್ನ ಹೇ ಬೆ ಮಾಡಲಾಗಿದೆ)

ನನ್ನ ಸಮಕ್ಷಮ,

ಓ.ಹೇ.ಕೇ.ಸರಿ.ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ. ಮುದ್ದೇಬಿಹಾಳ.